ಶ್ರೀ ಎಚ್. ಡಿ. ದೇವೇಗೌಡ :— ತಾವು ಆದೇಶ ಕೊಟ್ಟರೆ, ಅವರು ಕೂಡಲೇ ಬಿಡಿಸಿ ಕೊಡುತ್ತಾರೆ

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಅದರ ಬಗ್ಗೆ ಕೂಡಲೇ ಈ ದಿವಸವೇ ಡಿಪ್ಯೂಟಿ ಕಮಿಶನರಿಗೆ ತಿಳಿಸಿ ಆ ಸೈಟನ್ನು ಹಂಚಿ ಕೊಡುವ ವ್ಯವಸ್ಥೆ ಮಾಡುತ್ತೇವೆ ಮತ್ತು ಅಲ್ಲಿರತಕ್ಕಂತ ಜನರಿಗೆ ಬೇರೆ ಸೈಟ್ ಕೊಡುವುದಕ್ಕೆ ತಿಳಿಸುತ್ತೇವೆ.

(viii) re: assualt of people in Bhadravati.

‡ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ಭದ್ರಾವತಿಯಲ್ಲಿ ನಡೆದ ಪೋಲೀಸ್ ಎಕ್ಸೆಸ್ ಬಗ್ಗೆ ನಾನು ಒಂದು ನೋಟೀಸ್ ಕಳಿಸಿದ್ದೆ. ಅಲ್ಲಿ ಇರತಕ್ಕಂತಹ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಅವರು ೧೨ನೇ ತಾರೀಕಿನ ದಿವಸ ಪಾಲಿಟೆಕ್ನಿಕ್ ವಿದ್ಯಾರ್ಥಿಗಳ ಸಂಬಂಧದಲ್ಲಿ ಜನರನ್ನು ಸಿಕ್ಕಾಪಟ್ಟೆ ಹೊಡೆದಿದ್ದಾರೆ. ಇವೊತ್ತಿನ ದಿವಸ ಅಲ್ಲಿ ಸೆಕ್ಷನ್ ೧೪೪ ಜಾರಿ ಮಾಡಿದ್ದಾರೆಂದು ನಾನು ಕೇಳಿದ್ದೇನೆ. ೧೨ನೇ ತಾರೀಖು ರಾತ್ರಿ ನಿಮ್ಮ ಫ್ಯಾಕ್ಟರಿ ವರ್ಕರ್ಸ್ ಒಬ್ಬೊಬ್ಬರನ್ನು ಮನೆಯಿಂದ ಹಿಡಿದುಕೊಂಡು ಬಂದು ಸಿಕ್ಕಾಬಟ್ಟೆ ಒದ್ದಿದ್ದಾರೆ. ಆ ರೀತಿ ಹೊಡೆಸಿಕೊಂಡ ಪಾರ್ಟಿಯವರು ಇಲ್ಲಿಗೆ ಬಂದಿದ್ದರು. ರಕ್ತದ ಗುರುತು, ಹಾಗೂ ಮೈಮೇಲೆ ಗಾಯಗಳು ಇದ್ದುವು. ಮುಖ್ಯಮಂತ್ರಿಗಳನ್ನು ಸಾಧ್ಯವಾದರೆ ನೋಡಿ ಎಂದು ಹೇಳಿದೆ. ಇದರಲ್ಲಿ ಯಾವ ರಾಜಕೀಯ ಬಣ್ಣ ಬೇಡ. ನೀವೇ ಖುದ್ದು ಹೋಗಿ ನೋಡಿ; ನನಗೆ ಗೊತ್ತಿರುವ ಪ್ರಕಾರ ರಾಜಕೀಯ ಕೈವಾಡ ಇದೆಯೆಂದು ಕೇಳಿದ್ದೇನೆ. ಅಲ್ಲಿ ಸ್ಥಳೀಯ ರಾಜಕಾರಣಿಗಳ ಗುಂಪು ಒಂದು ಕಡೆ. ಮುನಿಸಿಪಲ್ ಪ್ರೆಸಿಡೆಂಟರ ಕಡೆಯ ಗುಂಪು ಒಂದು ಕಡೆ. ಆ ಮಟ್ಟಕ್ಕೆ ಕಾಂಗ್ರೆಸ್ (ಆರ್) ಮತ್ತು ಕಾಂಗ್ರೆಸ್ (ಓ) ಬಂದಿದ್ದಾರೆಂದು ಹೇಳಿದರು. ಅದರ ಪರಿಸ್ಥಿತಿ ನನಗೂ ಗೊತ್ತಿಲ್ಲ. ನನ್ನ ಹತ್ತಿರ ಮಾಹಿತಿ ಇಲ್ಲ. ಆದರೆ ನಿರಪರಾಧಿಗಳಾದ ವರ್ಕರ್ಸ್‌ಗೆ ರಾಜಕೀಯ ಮುಖಂಡರ ಪ್ರಭಾವದಿಂದ ರಾತ್ರಿ ೧೧—೧೨ಕ್ಕೆ ಈ ಕಷ್ಟ ಬಂದಿದೆ. ಅವರು ನಿರಪರಾಧಿಗಳು. ಇದರಲ್ಲಿ ಸತ್ಯಾಂಶ ವಿದೆಯೆಂದು ಕೇಳಿದ್ದೇನೆ. ನನ್ನ ಕಣ್ಣಿನಿಂದ ನೋಡಿದ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದು ಯಾವ ಕಾರಣದಿಂದ ಆಗಿದೆಯೆಂಬುದನ್ನು ತಿಳಿದು ಪೋಲೀಸ್ ಅಧಿಕಾರಿಗಳಿಂದ ಅಲ್ಲಿ ಅಸಭ್ಯವರ್ತನೆ ನಡೆದಿದ್ದರೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ. —ನನ್ನದೊಂದು ವಾಕ್ಯವನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ, ಈ ಸಂಭಂಧದಲ್ಲಿ ಮಾನ್ಯ ಸದಸ್ಯರ ಹತ್ತಿರ ಯಾರ್ಯಾರು ಬಂದಿದ್ದರೋ ಅವರೆಲ್ಲರೂ ನನ್ನ ಹತ್ತಿರವೂ ಸಹ ಬಂದಿದ್ದರು.

ಅಧ್ಯಕ್ಷರು. —ನಿಮ್ಮ ಹತ್ತಿರ ಬಂದಿದ್ದವರ ವಿಷಯವನ್ನು ಇಲ್ಲಿ ಹೇಳಬೇಕೇ ? ಅದಕ್ಕೆ ಸಮಾಧಾನ ಕರವಾದ ಜವಾಬು ಬಂದರೆ ಸರಿಯಲ್ಲವೇ? ಮಾನ್ಯ ಮುಖ್ಯಮಂತ್ರಿಗಳು ಈಗ ಉತ್ತರ ಹೇಳುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಅವರು ಬೇರೆ ತರಹದಲ್ಲಿ ಕೆಲವರು ತಪ್ಪು ಮಾಡಿದರೆ, ಆ ಬಗ್ಗೆ ಪೋಲೀಸಿನವರು ಆಕ್ಷನ್ ತೆಗೆದುಕೊಂಡಿದ್ದಾರೆ. ಅದರ ಬಗ್ಗೆ ನಾನೇನೂ ಹೇಳುವುದಿಲ್ಲ. ನಿಜವಾಗಿ ತಪ್ಪು ಇಲ್ಲದಿದ್ದವರ ಬಗ್ಗೆ ಪೋಲೀಸಿನವರು ಅಸಭ್ಯ ವರ್ತನೆ ತೋರಿಸಿದ್ದರೆ, ಆ ಬಗ್ಗೆ ಪೋಲೀಸಿನವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಡಿ. ದೇವರಾಜ ಅರಸ್.—ತಾವು ಈಗ ಈ ವಿಷಯ ಹೇಳಿದ್ದೀರಿ. ಬರೆದು ಕೊಟ್ಟಿದ್ದೀರಿ. ಇದರ ಬಗ್ಗೆ ನನಗೇನೂ ಮಾಹಿತಿ ಬಂದಿಲ್ಲ. ನನ್ನಲ್ಲಿ ಇದರ ಬಗ್ಗೆ ಯಾವ ದೂರೂ ಸಹ ನೇರವಾಗಿ ಬಂದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಈ ವಿಚಾರವಾಗಿ ಡೆಪ್ಯುಟಿ ಹೋಂ ಮಿನಿಸ್ಟರ್ ಅವರಿಗೂ, ಒಂದು ಕಂಪ್ಲೇಂಟ್ ಕೊಟ್ಟಿದೆ.

‡SRI D. DEVARAJ URS.—I have repeatedly stated on the floor of the house. I assure the hon. Leader of the Opposition and the House that I am not interested in this kind of low hitting politics. Simply because one person belongs to one group or political party, it is highly unfair on any body's part to take advantage because one is in power. If any such thing comes to my knowledge, I may tell you, I am not going to tolerate. Nor am I interested in doing such kind of things. I can assure the hon'ble Members about that. But at the same time

SRI D. DEVARAJ URS (Chief Minister)

I appeal to hon. Members: many a time the culprits want to give colour in order to escape. In this particular case, I do not know what the truth is. But just as you are relying on what has been told to you, you have been saying so and so is the cause. At the same time, I would like you Hon'ble Members to consider for a while that those who may be in fault may also come and tell you these things.—'we belong to a different party—so they want to take vengence. This way also people may give a twist. I would appeal to Hon'ble Members: let us not straight away believe these things. It has been brought to my notice. Without any kind of bias, whoever is in fault, I will try to take action

ಶ್ರೀ ಬಿ. ಪುಟ್ಟಸ್ವಾಮಯ್ಯ:—ಮಾನ್ಯ ಅಧ್ಯಕ್ಷರೇ, ಇದೇ ವಿಷಯದಲ್ಲಿ ಮಾನ್ಯ ಮಂಖ್ಯಿಮಂತ್ರಿಗಳ ಗಮನವನ್ನು ಸೆಳೆಯಂವುದಕ್ಕೆ ಇಚ್ಛಿಪಡಂತ್ತೇನೆ. ನಮ್ಮ ರಾಜ್ಯದ ಕೆಲವು ಪೋಲೀಸ್ ಸ್ಟೇಷನ್ನುಗಳಲ್ಲಿ ಆಗಾಗ್ಗೆ ಈ ರೀತಿ ನಡೆಯುತ್ತಿರುತ್ತದೆ. ಪೂರ್ತಿ ವೇಳೆ ಸಬ್ ಇನ್‌ಸ್ಪೆಕ್ಟರುಗಳು ಅನೇಕ ಸ್ಟೇಷನ್ನುಗಳಲ್ಲಿ ಇಲ್ಲದೇ ಇರುವುದರಿಂದ ಕೆಲವುಆಕ್ರಮಗಳು ನಡೆಯುವುದಕ್ಕೆ ಕಾರಣವಾಗುತ್ತದೆ ಇದಕ್ಕೆಅವರ ದೌರ್ಬಲ್ಯವೇ ಕಾರಣ. ಎಲ್ಲಾ ಸ್ಟೇಷನ್ನುಗಳಲ್ಲಿಪೂರ್ತಿವೇಳೆ ಸಬ್ ಇನ ಸ್ಪೆಕ್ಟರ್ಸ್ ಇರಬೇಕು. ಅಲ್ಲಿ ಕೆಲಸ ಮಾಡುವ ಜನರು ಇರಬೇಕು. ಎಷ್ಟೋ ಕಡೆಗಳಲ್ಲಿ ಹೆಡ್ ಕಾನ್‌ಸ್ಟೇಬಲ್ಸ್ ಅವರ ಚಾರ್ಜ್‌ನಲ್ಲಿರುತ್ತಾರೆ. ಕೆಲವು ಸಾರಿ ದೊಡ್ಡವರೇ ಅವರಿಂದ ಏಟು ತಿಂದು, ಅವರೇ ಫಿರ್ಯಾದು ಕೊಟ್ಟವರ ಹತ್ತಿನ ದುಡ್ಡು ತೆಗೆದು ಕೊಳ್ಳುತ್ತಾರೆ. ಹಿಡಿಯುವವರ ಹತ್ತಿರವೇ ದುಡ್ಡು ತೆಗೆದುಕೊಳ್ಳುತಾರೆ. ಇಂತಹ ಸಮಯದಲ್ಲಿ ಗೌರವ ತರತಕ್ಕ ಕಾರ್ಯ ಆಗುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಇಂತಹ ಸರ್ಕಾರ ದೂಷಣೆಗೆ ಒಳಗಾಗುತ್ತದೆ. ಆದ್ದರಿಂದ ಆಡಳಿತ ಸುವ್ಯವಸ್ಥೆಯಿಂದ ನಡೆಯಲಿ ಎಂದಂ ನಾನಂ ಪ್ರಾರ್ಥಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಅವರು ಹೇಳಿದ್ದು ಕೆಲವು ಸ್ಟೇಷನ್ನುಗಳಲ್ಲಿ ಸಬ್ ಇನ್‌ಸ್ಪೆಕ್ಟರ್ ತಾತ್ಕಾಲಿಕವಾಗಿ ಇರುವುದಿಲ್ಲವೆಂದು. ಆದರೆ ಚಾರ್ಜ್‌ನಲ್ಲಿರುವವರು ಅವರ ಕೆಲಸವನ್ನು ಚೆನ್ನಾಗಿ ಮಾಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಅಲ್ಲಿ ಫಿರ್ಯಾದು ಕೊಡುವುದಕ್ಕೆ ಹೋಗುವವರನ್ನೇ ಒಡಿದು ಕೊಂಡು ಹೊಡೆಯುತ್ತಾರೆ.

ಶ್ರೀ ಡಿ ದೇವರಾಜ್ ಅರಸ್.—ಮಾನ್ಯ ಶ್ರೀ ಲಿಂಗಪ್ಪನವರೇ, ಇದು ಹಳೆಯ ಚಾಳಿ. ಇದನ್ನು ಮೊದಲಿನಿಂದಲೂ ಕಲಿತುಕೊಂಡು ಬಂದಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ನಿಲ್ಲಿಸುವುದಕ್ಕೆ ಏನಾದರೂ ಪ್ರಯತ್ನ ಮಾಡಿ.

ಶ್ರೀ ಡಿ. ದೇವರಾಜ್ ಅರಸ್.—ಅದಕ್ಕೆ ಪ್ರಯತ್ನ ಮಾಡೋಣ. ಬಹಳ ದಿವಸಗಳಿಂದಲೂ ಕಲಿತಿರುವ ಚಾಳಿ ಏಕ್‌ದಂ ಹೋಗುತ್ತದೆಯೇ ದೇವರು.

ಶ್ರೀ ಹೆಚ್. ಡಿ. ದೇವೇಗೌಡ.—ನಾಳೆಯ ದಿನ ಅಸೆಂಬ್ಲಿ ಮುಗಿಯುತ್ತದೆ. ಆದ್ದರಿಂದ ಸಭೆಯು ಕಾಲವನ್ನು ವ್ಯರ್ಥಾ ತೆಗೆದುಕೊಳ್ಳುವ ಉದ್ದೇಶ ನನಗೆ ಇಲ್ಲ. ನಾನು ಬಳ್ಳಾರಿ ಬ್ಯಾಂಕಿನ ವಿಷಯವಾಗಿ ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೆ. ಅದೇನಾಯಿತೋ ಗೊತ್ತಿಲ್ಲ. ನಾವು ಒಂದು ನಿಯಮಾವಳಿಯ ಪರಿಮಿತಿಯೊಳಗೆ ನಡೆಯಬೇಕೆಂದು ತೀರ್ಮಾನ ಮಾಡಿ ಅದರಂತೆ ನಡೆಯುವ ಕಾಲದಲ್ಲಿ ಬಹಳ ಸಂಕಟ ಪರಿಸ್ಥಿತಿ ಇದೆ. ರೂಲ್ಸ್ ಪ್ರಕಾರ ಹೋದರೂ ಅದು ಚರ್ಚೆಗೆ ಬರುವುದಿಲ್ಲ. ಆದ್ದರಿಂದ ಈ ವಿಷಯವನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಅದಷ್ಟು ಜಾಗ್ರತೆಯಾಗಿ ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು.—ಈಗ ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಆ ಎರಡು ವಿಷಯಗಳ ಬಗ್ಗೆ ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಿ ಕಳುಹಿಸಿ. ಅವರು ಬಂದ ನಂತರ ಅದನ್ನು ಚರ್ಚೆಮಾಡಲು ಅವಕಾಶ ಮಾಡಿಕೊಡಬೇಕು.